155 ಶೇ ೭ ನಿ=72 = (16)
4 ರ್
17/07

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಶೀಲ್ ಜಿ. ನಮೋಶಿ ಇವರ ನಿಯಮ 72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

**ಪ್ರಶ್ನೆ:**

ಕರ್ನಾಟಕ ವಿಜ್ಞಾನ ಪರಿಷತ್ತು ನಾಡಿನಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸಲು 1980 ರಲ್ಲಿ ಪ್ರಾರಂಭಗೊಂಡ ರಾಜ್ಯಮಟ್ಟದ ಸ್ವಾಯತ್ತ ಸಂಸ್ಥೆ. ಖ್ಯಾತ ಶಿಕ್ಷಣ ತಜ್ಞ ಡಾ:ಹೆಚ್.ನರಸಿಂಹಯ್ಯ, ಪ್ರೊ:ಸೇತುರಾವ್, ಹಾ.ಮ.ನಾಯಕ, ಡಾ:ಸಾ.ಜ.ನಾಗಲೋಟಿ ಮಠ ಸೇರಿದಂತೆ ಅನೇಕ ಮಹನೀಯರ ನೇತೃತ್ವದಲ್ಲಿ ಪ್ರಾರಂಭಗೊಂಡ ಸಂಸ್ಥೆ. ಇಂದು ಈ ಸಂಸ್ಥೆಯ ಅಧ್ಯಕ್ಷರ ಹುದ್ದೆಗೆ ಚುನಾವಣೆಯನ್ನೇ ನಡೆಸದೆ ವಿಳಂಬ ಮಾಡಿ ಈಗ ಆಡಳಿತಾಧಿಕಾರಿಯನ್ನು ನೇಮಕ ಮಾಡಿದ್ದು, ಪರಿಷತ್ತಿನ ಕಾರ್ಯಚಟುವಟಿಕೆಗಳು ಕುಂಠಿತಗೊಂಡಿವೆ. ಆದ್ದರಿಂದ ಇದೊಂದು ರಾಜ್ಯದ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯ ಪ್ರಮುಖ ವಿಷಯವಾಗಿದ್ದು, ಈ ಬಗ್ಗೆ ಶೀಘ್ರವಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆ ಮಾನ್ಯ ಸಹಕಾರ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ:**

ಕರ್ನಾಟಕ ವಿಜ್ಞಾನ ಪರಿಷತ್ತು, ಬೆಂಗಳೂರು ಈ ಸಂಘವು ನವೆಂಬರ್ 1980ರಲ್ಲಿ ನೋಂದಣಿಯಾಗಿದ್ದು, ಸಂಘದ ಪ್ರಮುಖ ಉದ್ದೇಶ ರಾಜ್ಯದಲ್ಲಿ ವಿಜ್ಞಾನ, ವೈಜ್ಞಾನಿಕ ಮನೋಧರ್ಮ, ಔಪಚಾರಿಕ ಮತ್ತು ಅನೌಪಚಾರಿಕ ವಿಜ್ಞಾನ ಶಿಕ್ಷಣಗಳನ್ನು ಗ್ರಾಮೀಣ ಪ್ರದೇಶದಲ್ಲಿ ಅಭಿವೃದ್ಧಿಪಡಿಸುವುದಾಗಿರುತ್ತದೆ. ಸಂಘವು ವಿಜ್ಞಾನ ಭವನ, ಬನಶಂಕರಿ 2ನೇ ಹಂತ, ಬೆಂಗಳೂರು ಇಲ್ಲಿ ತನ್ನ ಕಛೇರಿಯನ್ನು ಹೊಂದಿದ್ದು, ಸಂಘದ ಕಛೇರಿಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ 2000ನೇ ಇಸವಿಯಿಂದ 30 ವರ್ಷಗಳವರೆಗೆ ನಿವೇಶನವನ್ನು ಲೀಸಿಗೆ ಪಡೆಯಲಾಗಿರುತ್ತದೆ.

ಸಂಘದಲ್ಲಿ ದಿನಾಂಕ:31.12.2023ಕ್ಕೆ ಇದ್ದಂತೆ ಒಟ್ಟು 13,029 ಸದಸ್ಯರಿರುತ್ತಾರೆ. ಸಂಘದ ಕಾರ್ಯಕಾರಿ ಸಮಿತಿ ಅವಧಿಯು 03 ವರ್ಷಗಳಾಗಿದ್ದು ಹಿಂದಿನ ಕಾರ್ಯಕಾರಿ ಸಮಿತಿ ಅವಧಿಯು ದಿನಾಂಕ:25.02.2023ಕ್ಕೆ ಮುಕ್ತಾಯಗೊಂಡು ಕಾರ್ಯಕಾರಿ ಸಮಿತಿಯಲ್ಲಿ ಶೂನ್ಯತೆ ಉಂಟಾದ ಕಾರಣದಿಂದ ದಿನಾಂಕ:15.03.2024 ರಂದು ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಲಾಗಿರುತ್ತದೆ.

2021-22ನೇ ಸಾಲಿನವರೆಗೆ ಸಂಘದ ಲೆಕ್ಕಪರಿಶೋಧನೆಯು ಪೂರ್ಣಗೊಂಡಿದ್ದು, 2022-23ನೇ ಅವಧಿಯ ಲೆಕ್ಕಪರಿಶೋಧನಾ ಕಾರ್ಯಪ್ರಗತಿಯಲ್ಲಿರುತ್ತದೆ.

ಸಂಘದ ಸದಸ್ಯತ್ವ ಕುರಿತಂತೆ 2022 ನೇ ಸಾಲಿನಿಂದಲೂ ಹಲವಾರು ದೂರು ಅರ್ಜಿಗಳು ಜಿಲ್ಲಾ ನೋಂದಣಾಧಿಕಾರಿಗಳಿಗೆ ಸ್ವೀಕೃತಿಯಾಗಿದ್ದು ಸದರಿ ದೂರು ಅರ್ಜಿಗಳ ಸತ್ಯಾಸತ್ಯತೆಯನ್ನು ಅರಿಯುವ ಸಲುವಾಗಿ ದಿನಾಂಕ:11.08.2023 ರಂದು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ1960ರ ಕಲಂ 25ರಡಿ ಒಟ್ಟು 07 ವಿಚಾರಣಾಂಶಗಳ ಕುರಿತಂತೆ ವಿಚಾರಣಾಧಿಕಾರಿಯನ್ನು ನೇಮಿಸಲಾಗಿರುತ್ತದೆ.

ಸಂಘಕ್ಕೆ ಚುನಾವಣೆ ನಡೆಸಲು ದಿನಾಂಕ:04-10-2024 ರಂದು ಚುನಾವಣಾಧಿಕಾರಿಯನ್ನು ನೇಮಿಸಲಾಗಿರುತ್ತದೆ. ಅದರಂತೆ ಚುನಾವಣಾ ವೇಳಾಪಟ್ಟಿಯನ್ನು ದಿನಾಂಕ:02-12-2024 ರಂದು ಪ್ರಕಟಿಸಿರುತ್ತಾರೆ ಹಾಗೂ ಕರಡು ಮತದಾರರ ಪಟ್ಟಿಯನ್ನು ಸಂಘದ ಅಧಿಕೃತ ವೆಬ್‌ಸೈಟ್‌ನಲ್ಲಿ

ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿ, ಸದಸ್ಯತ್ವ ಕುರಿತಂತೆ ಹಲವಾರು ಆಕ್ಷೇಪಣೆಗಳು ಚುನಾವಣಾಧಿಕಾರಿಯವರಿಗೆ ಸ್ವೀಕೃತವಾಗಿರುತ್ತವೆ.

ಈ ಮಧ್ಯೆ ವಿಚಾರಣಾಧಿಕಾರಿಗಳು ಕಲಂ 25ರ ವಿಚಾರಣಾ ವರದಿಯನ್ನು ಜಿಲ್ಲಾ ನೋಂದಣಾಧಿಕಾರಿಗಳಿಗೆ ದಿನಾಂಕ:31-12-2024 ರಂದು ಸಲ್ಲಿಸಿರುತ್ತಾರೆ. ವಿಚಾರಣಾ ವರದಿಯಲ್ಲಿನ ಒಟ್ಟು 07 ವಿಚಾರಣಾಂಶಗಳಲ್ಲಿ 04 ಅಂಶಗಳು ಸಾಬೀತಾಗಿರುತ್ತವೆ.

ಸಂಘದ ಸದಸ್ಯತ್ವ ಕುರಿತ ಆರೋಪದಲ್ಲಿ ಪ್ರಮುಖವಾಗಿ ಈ ಕೆಳಕಂಡ ನ್ಯೂನ್ಯತೆಗಳನ್ನು ಗುರುತಿಸಲಾಗಿದೆ.

1. ಸಂಘದ ಉಪನಿಯಮ ಸಂಖ್ಯೆ.2ರಂತೆ ಸದಸ್ಯತ್ವ ಅರ್ಜಿಗಳು ಅಪೂರ್ಣವಾಗಿರುತ್ತವೆ.
2. ಸಂಘದ ಸದಸ್ಯತ್ವ ನೀಡುವ ಸಮಯದಲ್ಲಿ ಯಾವುದೇ ಪತ್ರಿಕಾ ಪ್ರಕಟಣೆ ಅಥವಾ ಸಂಘದ ಅಧಿಕೃತ ವೆಬ್‌ಸೈಟಿನಲ್ಲಿ ಯಾವುದೇ ಪ್ರಕಟಣೆ ನೀಡದೆ ದಿನಾಂಕ: 25.02.2022ರಂದು ಸುಮಾರು 2235 ಸದಸ್ಯತ್ವ ಅರ್ಜಿಗಳಿಗೆ ಒಟ್ಟು ರೂ.39.97ಲಕ್ಷಗಳನ್ನು ಇಡುಗಂಟಿನಲ್ಲಿ ಪಾವತಿಸಿ ದಿನಾಂಕ:25.02.2022 ರಂದೇ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಎಲ್ಲಾ ಅರ್ಜಿಗಳನ್ನು ಒಂದೇ ಬಾರಿಗೆ ನಿಯಮಬಾಹಿರವಾಗಿ ಅನುಮೋದಿಸಲಾಗಿರುತ್ತದೆ.
3. ಈಗಾಗಲೇ ಸಂಘದ ಚುನಾವಣೆ ಕುರಿತು ಮಾನ್ಯ ಘನ ಉಚ್ಛ ನ್ಯಾಯಾಲಯದಲ್ಲಿ 2 ರಿಟ್ ಅರ್ಜಿಗಳು ದಾಖಲಾಗಿರುತ್ತವೆ (ರಿಟ್ ಅರ್ಜಿಸಂಖ್ಯೆ: 11952/2023 ಮತ್ತು ರಿಟ್ ಅರ್ಜಿ ಸಂಖ್ಯೆ: 3802/2025). ಸದರಿ ಪ್ರಕರಣಗಳು ದಿನಾಂಕ:18.02.2025ರಂದು ವಿಚಾರಣೆಗೆ ಬಂದಿದ್ದು, ಮುಂದಿನ ವಿಚಾರಣಾ ದಿನಾಂಕ ನಿಗದಿಯಾಗಿರುವುದಿಲ್ಲ. ಸದರಿ ಪ್ರಕರಣಗಳು ವಿಚಾರಣಾ ಹಂತದಲ್ಲಿದ್ದು ಮಾನ್ಯ ಉಚ್ಛ ನ್ಯಾಯಾಲಯದ ತೀರ್ಪು ಬಂದ ನಂತರ ಕ್ರಮವಿಡಲಾಗುವುದು.

ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ1960ರ ಕಲಂ 25ರ ವಿಚಾರಣಾ ವರದಿಯಲ್ಲಿನ ನ್ಯೂನ್ಯತೆಗಳನ್ನು ಸರಿಪಡಿಸಿ ನಂತರ ಚುನಾವಣೆಗೆ ಕ್ರಮವಿಡುವಂತೆ ಈಗಾಗಲೇ ಜಿಲ್ಲಾ ನೋಂದಣಾಧಿಕಾರಿಗಳು ಆಡಳಿತಾಧಿಕಾರಿಗಳಿಗೆ ಸೂಚಿಸಿರುತ್ತಾರೆ. ಅದರಂತೆ, ಆಡಳಿತಾಧಿಕಾರಿಗಳು ಸದಸ್ಯತ್ವದ ನ್ಯೂನ್ಯತೆಗಳನ್ನು ಸರಿಪಡಿಸಲು ಕರಡು ಮತದಾರರ ಪಟ್ಟಿ ಸಿದ್ಧಪಡಿಸುವ ಸಂಬಂಧ ಸಂಘದ ಬೈಲಾ ಸಂಖ್ಯೆ-2 ರನ್ವಯ ದಾಖಲಾತಿಗಳನ್ನು ಸಲ್ಲಿಸುವಂತೆ ತಿಳಿಸಿ 45 ದಿನಗಳ ಕಾಲಾವಕಾಶವನ್ನು ನೀಡಿ ಪ್ರಕಟಣೆಯನ್ನು ದಿನಾಂಕ:22.02.2025ರಂದು ಸಂಘದ ಅಧಿಕೃತ ವೆಬ್‌ಸೈಟಿನಲ್ಲಿ ಪ್ರಕಟಿಸಿರುತ್ತಾರೆ. ಸಂಘದ ಚುನಾವಣೆ ಕುರಿತಂತೆ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಕೆಯಾಗಿರುವ ರಿಟ್ ಅರ್ಜಿಗಳ ಆದೇಶಾನುಸಾರ ಚುನಾವಣಾ ಪ್ರಕ್ರಿಯೆಯನ್ನು ಜರುಗಿಸಲು ಕ್ರಮವಿಡಲಾಗುವುದು.

**ಸಂಖ್ಯೆ: ಸಿಒ 74 ಸಿ.ಎಸ್.ಆರ್ 2025 (ಇ)**

K. N. Rajanna

**(ಕೆ.ಎನ್. ರಾಜಣ್ಣ)**
**ಸಹಕಾರ ಸಚಿವರು**